**ದಿನಾಂಕಃ 14/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿ ಪರ ಶ್ರೀ. ಕೆ ಬಿ ವಕೀಲರಿಂದಃ**

6. ನಾನು ವ್ಯಾಸಂಗ ಮಾಡಿಲ್ಲ, ದಾವಾ ಸ್ವತ್ತಗಳನ್ನು ಹೊರತು ಪಡಿಸಿ ನನಗೆ ಬೇರೆ 3 ಎಕರೆ ಇದೆ. ಸ್ವತ್ತುಗಳು ಸಣ್ಣಪ್ಪಯ್ಯ ಮತ್ತು ಪಾಪಯ್ಯ ರವರ ಹೆಸರಿನಲ್ಲಿದೆ. ಸಣ್ಣಪ್ಪಯ್ಯ ಮತ್ತು ಪಾಪಯ್ಯರವರ ಹೆಸರಿನಲ್ಲಿರುವ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ. ಈ ದಾವೆಯಲ್ಲಿ 26 ಗುಂಟೆಯನ್ನು ಮಾತ್ರ ಸೇರಿಸಿಕೊಂಡಿದ್ದೇನೆ. ಅವರಿಬ್ಬರು ಅದನ್ನು ಖಾತೆ ಮಾಡಿಸಿಕೊಂಡಿದ್ದಾರೆ. ನನ್ನ ತಂದೆ ಹೆಸರಿನಲ್ಲಿ ಸದರಿ 26 ಗುಂಟೆ ಇತ್ತು ಎಂದು ತೋರಿಸಲು ಆರ್.ಟಿ.ಸಿ. ಯನ್ನು ಹಾಜರುಪಡಿಸಿರುತ್ತೇನೆ. 2014 ರಿಂದ ಇಲ್ಲಿಯವರೆಗೂ ಆರ್.ಟಿ.ಸಿ. ಗಳನ್ನು ಹಾಜರುಪಡಿಸಿರುತ್ತೇನೆ.

7. ತಿಮ್ಮಯ್ಯ ರವರು ದೊಡ್ಡಪ್ಪ ರವರ ಮಗ. ಸಣ್ಣಪ್ಪನ ಮಗ ಪಾಪಯ್ಯ. ಸ. ನಂ.55/1 ವಿಭಾಗವಾಗುವಾಗ 26 ಗುಂಟೆ ಇತ್ತು ಎಂದರೆ ಸರಿ. 1976-77 ನೇ ಆರ್.ಟಿ.ಸಿ. ಯಲ್ಲಿ ದೊಡ್ಡಪ್ಪ ಮತ್ತು ಸಣ್ಣಪ್ಪ ರವರು ಹೆಸರನ್ನು ಬ್ರಾಕೆಟ್ ಮಾಡಿ ತಿಮ್ಮಯ್ಯ ಪೌತಿ ಮೇರೆಗೆ ಖಾತೆ ಆಗಿದೆ ಎಂದರೆ ಸಣ್ಣಪ್ಪ ಮತ್ತು ಪಾಪಯ್ಯ ರವರಿಗೂ ಸಹ ಖಾತೆ ಆಗಿದೆ ಎಂದು ನುಡಿಯುತ್ತಾರೆ. ಸ.ನಂ.55/1 ತಿಮ್ಮಯ್ಯರವರ ನಿಧನದವರೆಗೂ ಅವರ ಹೆಸರಿನಲ್ಲೇ ಖಾತೆ ಇತ್ತು ಇದ್ದು ಅವರೇ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ಖಾತೆ ಇತ್ತು, ಆದರೆ ಸ್ವಾಧೀನಾನುಭವದಲ್ಲಿ ನಾವೇ ಇದ್ದೇವೆ ಎಂದು ನುಡಿಯುತ್ತಾರೆ.

8. ಸ. ನಂ. 41/2, 42/3, 45/2, 53/4, 53/7, 54/6, 55/5, 55/11, 55/20, 135/10, 159/6, 161/6, 161/7, 161/9, 191/3, 191/5, 53/5, 54/6, 55/17, 55/11, 55/20, 55/5, ರ ಆರ್.ಟಿ.ಸಿ. ಯನ್ನು ನಾನು ಹಾಜರುಪಡಿಸಿಲ್ಲ. ಸದರಿ ಸ್ವತ್ತುಗಳು ನಮಗೆ ಸೇರಿದ್ದು. ಸದರಿ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು. ಸದರಿ ಸ್ವತ್ತುಗಳು ಪಾಪಯ್ಯ ರವರಿಗೆ ಹಿಸ್ಸೆಗೆ ಬಂದ

ಸ್ವತ್ತುಗಳು. ಸದರಿ ಸ್ವತ್ತುಗಳು ಪಾಪಯ್ಯ ರವರಿಗೆ ಪೌತಿ ಮೇರೆಗೆ ಬಂದಂತಹ ಸ್ವತ್ತುಗಳು. ತಿಮ್ಮಯ್ಯ ರವರಿಗೂ ದಾವಾ ಸ್ವತ್ತು ಹಿಸ್ಸೆ ಮೇರೆಗೆ ಬಂದಂತಹ ಸ್ವತ್ತುಗಳು ಎಂದರೆ ಸರಿಯಲ್ಲ. ತಿಮ್ಮಯ್ಯ ರವರು ತೀರಿಕೊಂಡ ನಂತರ ಅವರ ಮಕ್ಕಳಿಗೆ ಪೌತಿ ಮೇರೆಗೆ ಖಾತೆ ಆಯಿತು ಎಂದರೆ ಸರಿ. ಹೆಚ್ ಟಿ ರಂಗಸ್ವಾಮಿ ರವರು ಮರಣಗೊಂಡ ನಂತರ ಅವರ ಹೆಂಡತಿ ಸರೋಜಮ್ಮ ರವರ ಹೆಸರಿಗೆ ಪೌತಿ ಖಾತೆ ಆಯಿತು ಎಂದರೆ ಬೇರೆಯವರಿಂದ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.

4. ಸ. ನಂ.55/1, ಹಿಸ್ಸೆ ಮೇರೆಗೆ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಗಂಡನಾದ ಹೆಚ್ ಟಿ ರಂಗಸ್ವಾಮಿ ರವರ ಹೆಸರಿಗೆ ಸ. ನಂ.55/1 ಮತ್ತು 55/22 ಎಂದು ಖಾತೆ ಆಗಿದೆ ಎಂದರೆ ಸರಿ. ದೊಡ್ಡಪ್ಪ ಮತ್ತು ಸಣ್ಣಪ್ಪ ರವರು ದಾವಾ ಸ್ವತ್ತು ಮತ್ತು ಇತರೇ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಭಾಗ ಮಾಡಿಕೊಂಡು ಒಟ್ಟಿಗೆ ಸ್ವಾಧೀನದಲ್ಲಿದ್ದರು ಎಂದು ನುಡಿಯುತ್ತಾರೆ. ಅವರು ಒಟ್ಟಿಗೆ ಸ್ವಾಧೀನದಲಿಲ ಇರಲಿಲ್ಲ, ಪ್ರತ್ಯೇಕವಾಗಿ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಪ್ರತ್ಯೇಕವಾಗಿ ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದರು ಎಂದು ಗೊತ್ತಿದ್ದರೂ ಸಹ ಒಟ್ಟಿಗೆ ಇದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡಪ್ಪನವರ ಹಿಸ್ಸೆಗೆ ಬಂದ ಸ್ವತ್ತು ತಿಮ್ಮಯ್ಯ ರವರ ಹೆಸರಿಗೆ ಖಾತೆ ಆಗಿ ಅವರ ಮರಣದ ನಂತರ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯ ಗಂಡನ ಹೆಸರಿಗೆ ಪೌತಿ ಮೇರೆಗೆ ಖಾತೆ ಆಗಿ ನಂತರ ಅವರ ನಡುವೆ ಹಿಸ್ಸೆ ಆಯಿತು ಎಂದರೆ ಸರಿಯಲ್ಲ. ಆ ರೀತಿ ಹಿಸ್ಸೆ ಆದ ಮೇರೆಗೆ ಮತ್ತು ಖಾತೆ ಆದ ಮೇರೆಗೆ ದಾವಾ ಸ್ವತ್ತುನಲ್ಲಿ ನನಗೆ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುನಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ನಿಜಾಂಶಗಳು ಗೊತ್ತಿದ್ದರೂ ಸಹ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 5 ರಿಂದ 9 ನೇ ಪ್ರತಿವಾದಿಗಳು ಶಾಮೀಲಾಗಿ ದಾವಾ ಸ್ವತ್ತನ್ನು ಕಬಳಿಸಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

(ಪಾಟೀ ಸವಾಲು ಇತರೇ ಪ್ರತಿವಾದಿಗಳು ಮತ್ತು ವಕೀಲರು ಗೈರು ಹಾಜರು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**